**ದಿನಾಂಕಃ 07/03/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಪಾಟೀಸವಾಲುಃ- ಶ್ರೀ ಹೆಚ್.ಎಸ್.ಎ. ವಕೀಲರಿಂದ**

1979 ರಲ್ಲಿ ವಿಭಾಗ ಆಗಿದೆ ಎನ್ನಲಾದ ನಂತರ ಹಳೆ ಸರ್ವೆ ನಂ. 95, ಹೊಸ ಸರ್ವೆ ನಂ. 107 ರಲ್ಲಿ ಇದ್ದ 4 ಎಕರೆ ಪೈಕಿ 2 ಎಕರೆ ಜಮೀನು ಬಹುತ್ವದಲ್ಲಿ ಅನುಭವದಲ್ಲಿ ಇತ್ತು. ಸದರಿ ಬಹುತ್ವದಲ್ಲಿ ಅಂದರೆ ಯಾರು ಯಾರು ಸ್ವಾಧೀನದಲ್ಲಿ ಇದ್ದರ ಎಂದರ ಸಾಕ್ಷಿಯು ಸದರಿ 4 ಎಕರೆ ಪೈಕಿ ಮೂರೂ ಜನಕ್ಕೂ ತಲಾ ಒಂದೊಂದು ಎಕರೆ ಕೊಟ್ಟು ಉಳಿದ 1 ಎಕರೆ ಸ್ವತ್ತನ್ನು ನನ್ನ ತಂದೆಯ ಹೆಸರಿನಲ್ಲಿ ಇರಲಿ ಎಂದು ಹಾಗೆಯೇ ಇಟ್ಟಿದ್ದರು ಎಂದು ನುಡಿಯುತ್ತಾರೆ. ಆ ರೀತಿ ವಿಭಾಗ ಪತ್ರದಲ್ಲಿ ತೋರಿಸಿರಲಿಲ್ಲ. ಸಾಕ್ಷಿಗೆ ದಿಃ 16.11.2017 ರಂದು 2ನೇ ಪ್ರತಿವಾದಿಯ ಪರವಾಗಿ ಹಾಜರುಪಡಿಸಿದ ದಾಖಲೆಗಳ ಪಟ್ಟಿಯಲ್ಲಿ ಇರುವ ಪಾಲು ಪಾರಿಕತ್ತಿನ ಪ್ರತಿಯನ್ನು ತೋರಿಸಿ ಅದನ್ನು 2ನೇ ಪ್ರತಿವಾದಿಯ ಕೃಷ್ಣೇಗೌಡ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದು ಎಂದರೆ ಸಾಕ್ಷಿಯು ಸದರಿ ಪಾಲುಪಾರಿಕತ್ ಪ್ರತಿಯನ್ನು ನೋಡಿ ಹೌದು ಎಂದು ನುಡಿಯುತ್ತಾರೆ. ಸದರಿ ಪಾಲುಪಾರಿಕತ್ ನ ಪ್ರತಿಯಲ್ಲಿ ಕೃಷ್ಣೇಗೌಡರ ಹಿಸ್ಸೆಗೆ ಸರ್ವೆ ನಂ. 95 ರಲ್ಲಿ ಕೊಡಲಾಗಿದೆ ಎನ್ನಲಾದ 2 ಎಕರೆಯನ್ನು ತಿದ್ದಲಾಗಿದೆ ಎಂದರೆ ಸರಿ. 2ನೇ ಪ್ರತಿವಾದಿಗೆ ಸದರಿ ಸರ್ವೆ ನಂಬರಿನಲ್ಲಿ ಇದ್ದಿದ್ದು 1 ಎಕರೆ ಎಂದರ ಸರಿ. ಸದರಿ ಮೂರು ಜನಕ್ಕೂ ತಲಾ ಒಂದೊಂದು ಎಕರೆಯಂತೆ ನೀಡಿ ನನ್ನ ತಂದೆಯ ಹೆಸರಿನಲ್ಲಿ ಇರಲಿ ಎಂದು ಬಿಟ್ಟಿದ್ದ 1 ಎಕರೆ ಜಮೀನನ್ನು 2ನೇ ಪ್ರತಿವಾದಿಯೇ ವ್ಯವಸಾಯ ಮಾಡುತ್ತಿದ್ದರು. ಅದನ್ನು 2ನೇ ಪ್ರತಿವಾದಿ 1979 ನೇ ಇಸವಿಯಿಂದಲೂ ವ್ಯವಸಾಯ ಮಾಡುತ್ತಿದ್ದರು.

2. ಸದರಿ ಪಾಲುಪಾರಿಕತ್ ಮಾಡಿಕೊಳ್ಳಲಾಗಿದೆ ಎನ್ನಲಾದ ಎಷ್ಟು ವರ್ಷಗಳ ನಂತರ ನನ್ನ ತಂದೆ ಮರಣ ಹೊಂದಿರುತ್ತಾರೆ ಎಂದು ನನಗೆ ನೆನಪಿಲ್ಲ. ಅಂದಾಜು ಪಾಲು ಪಾರಿತಕ್ ಆದ ಸುಮಾರು 10 ವರ್ಷಗಳ ನಂತರ ಮರಣ ಹೊಂದಿರಬಹುದೇ ಎಂದರೆ ಸಾಕ್ಷಿಯು ಇರಬಹದು ಎಂದು ನುಡಿಯುತ್ತಾರೆ. ಆ ರೀತಿ ಪಾಲುಪಾರಿಕತ್ ಆದ ಸುಮಾರು 10 ವರ್ಷಗಳ ನಂತರ ನನ್ನ ತಂದೆ ಮರಣ ಹೊಂದಿದ ನಂತರ ಸದರಿ 1 ಎಕರೆ ಜಮೀನನ್ನು 2ನೇ ಪ್ರತಿವಾದಿಯೇ ಮಾಡುತ್ತಿದ್ದರು. ನನ್ನ ತಂದೆ ಮರಣ ಹೊಂದಿದ ನಂತರ

ಸದರಿ 1 ಎಕರೆ ಸ್ವತ್ತಿನಲ್ಲಿ ನಮಗೂ ಹಿಸ್ಸೆ ಬರಬೇಕು ಎಂದು ನಾವು ಕೇಳಿದೆವು ಆಗ 2ನೇ ಪ್ರತಿವಾದಿ ನ್ಯಾಯಾಲಯಲ್ಲಿ ಹೋಗಿ ನಿಮ್ಮ ಹಿಸ್ಸೆ ತೆಗೆದುಕೊಳ್ಳಿ ಎಂದು ಹೇಳಿದರು ಎಂದು ನುಡಿಯುತ್ತಾರೆ.

3. ನಾನು ನಮ್ಮ ಮನೆಯ ಕುಟುಂಬದ ಹಿರಿಯ ಮಗ ಎಂದರೆ ಸರಿ. ಸದರಿ ಪಾಲುಪಾರಿಕತ್ ನ ಮೂಲ ದಾಖಲೆ 2ನೇ ಪ್ರತಿವಾದಿಯ ಬಳಿಯೇ ಇತ್ತು. ನೀವು ಹಿರಿಯ ಮಗನಾಗಿದ್ದು ಸದರಿ ಪಾಲುಪಾರಿಕತ್ ನ ಮೂಲ ದಾಖಲೆಯನ್ನು ನೀವು ಇಟ್ಟುಕೊಳ್ಳಬೇಕಾಗಿತ್ತು ಎಂದರೆ ಸಾಕ್ಷಿಯು ನನಗೆ ಬುದ್ಧಿ ಸರಿಯಿರಲಿಲ್ಲ ಆದ್ದರಿಂದ 2ನೇ ಪ್ರತಿವಾದಿ ಅದನ್ನು ಇಟ್ಟುಕೊಂಡಿದ್ದರು ಎಂದು ನಂತರ ಅದನ್ನು ತಿದ್ದಿರುತ್ತಾರೆ ಎಂದು ನುಡಿಯುತ್ತಾರೆ.

4. ಸಾಕ್ಷಿಗೆ ದಿಃ 05.04.1979 ರ ಪಾಲುಪಾರಿಕತ್ ನ ಪ್ರತಿಯನ್ನು ತೋರಿಸಿ ಅದು 2ನೇ ಪ್ರತಿವಾದಿ ಜೆರಾಕ್ಸ್ ಮಾಡಿಸಿ ವಾದಿಗೆ ಕೊಟ್ಟಿರುವ ಪ್ರತಿ ಎಂದು ಸಾಕ್ಷಿಗೆ ಕೇಳಲಾಗಿ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಹೌದು ಎಂದು ನುಡಿಯುತ್ತಾರೆ. ಸದರಿ ಪಾಲುಪಾರಿಕತ್ ಪ್ರತಿಯಲ್ಲಿ ಸದರಿ ಸರ್ವೆ ನಂ. 95 ರಲ್ಲಿ 2ನೇ ಪ್ರತಿವಾದಿಗೆ 1 ಎಕರೆ ಎಂದು ಇರುವುದನ್ನು 2 ಎಕರೆ ಎಂಬುದಾಗಿಯೂ, ವಾದಿಗೆ 2 ಎಕರೆ ಎಂದಿರುವುದನ್ನು 1 ಎಕೆರೆ ಎಂಬುದಾಗಿಯೂ ತಿದ್ದಲಾಗಿದೆ ಎಂದರೆ ಸರಿ. 2ನೇ ಪ್ರತಿವಾದಿ ನ್ಯಾಯಾಲಯದಲ್ಲಿ ಹೋಗಿ ಹಿಸ್ಸೆಯನ್ನು ತೆಗೆದುಕೊಳ್ಳಿ ಎಂದು ಹೇಳಿದ ನಂತರ ನಿಮಗೆ ಪೊಲೀಸ್ ಠಾಣೆ ದೂರನ್ನು ಕೊಡಲಾಗಲೀ, ತಾಲ್ಲೂಕು ಕಛೇರಿಗೆ ಅರ್ಜಿಯನ್ನು ಕೊಡಲಾಗಲೀ ಅಥವಾ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಲು ಆಗಲೀ ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ನಾವು ಯಾವುದಕ್ಕೂ ಹೋಗಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ಸದರಿ ಸರ್ವೆ ನಂ. 95 ರ ಉಳಿದ 1 ಎಕರೆ ಜಮೀನನ್ನು ಮೂರು ಭಾಗ ಮಾಡಿಕೊಳ್ಳಲೆಂದು ಊರಿನಲ್ಲಿ ಪಂಚಾಯಿತಿ ಏನಾದರೂ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಆ ರೀತಿ ಯಾವುದೇ ಪಂಚಾಯಿತಿ ಮಾಡಿಲ್ಲ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿ ಸರ್ವೆ ನಂ. 95 ರಲ್ಲಿ 1 ಎಕರೆಯನ್ನು 2 ಎಕರೆ ಎಂದು ತಿದ್ದುಪಡಿ ಮಾಡಿ ಅವರ ಮಕ್ಕಳ ಹೆಸರಿಗೆ ಖಾತೆಯನ್ನು ಮಾಡಿಸಲೆಂದು ಅಳತೆ ಮಾಡಿಸಿದ ಸಮಯದಲ್ಲಿ ನಿಮಗೆ ತಕರಾರು ಸಲ್ಲಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನಮಗೆ ಗೊತ್ತಿಲ್ಲದೇ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

5. 2012 ರಲ್ಲಿ ವಾದಿ ದಾವೆಯನ್ನು ಹೂಡಿದ ನಂತರ ಸದರಿ ದಾವೆಯ ಸಮನ್ಸ್ ಗೆ ಜಾರಿಯಾಗಿ ನಾನು ವಕೀಲರನ್ನು ಕೂಡ ನೇಮಿಸಿಕೊಂಡಿರುತ್ತೇನೆ ಎಂದರೆ ಸರಿ. ಆ ರೀತಿ ವಕೀಲರನ್ನು ನೇಮಿಸಿದ ನಂತರ

ನನಗೆ ಈ ದಾವೆಯಲ್ಲಿ ಲಿಖಿತ ಹೇಳಿಕೆಯನ್ನು ಸಲ್ಲಿಸಲು ತೊಂದರೆ ಇರಲಿಲ್ಲ. ಸಾಕ್ಷಿಯು ಯಾವಾಗಲಾದರೂ ಜಮೀನು ಬಂದೇ ಬರುತ್ತದೆ ಎಂದು ಇದ್ದೆನು ಎಂದು ನುಡಿಯುತ್ತಾರೆ. ವಾದಿಯ ಒಬ್ಬ ಮಗಳು ಅಂಗವಿಕಲೆ ಎಂದರೆ ಸರಿ.

6. ನನ್ನ ತಂದೆ ಬದುಕಿದ್ದಾಗಲೂ, ಮರಣ ಹೊಂದಿದ ನಂತರವೂ ನಮ್ಮ ಕುಟುಂಬದ ವ್ಯವಹಾರವನ್ನು 2ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. 2ನೇ ಪ್ರತಿವಾದಿ ಸದರಿ ಪಾಲುಪಾರಿಕತ್ ನ ಮೂಲ ದಾಖಲೆಯನ್ನು ತಾನೇ ಇಟ್ಟುಕೊಂಡು ವೈಯಕ್ತಿಕವಾಗಿ ಬೇಕಾದ ಹಿತಾಸಕ್ತಿಗಾಗಿ 1 ಎಕರೆಯನ್ನು 2 ಎಕರೆ ಎಂಬುದಾಗಿ ತಿದ್ದಿರುತ್ತಾರೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಗೆ ವಾದಿಗಿಂತ ಹೆಚ್ಚು ವ್ಯವಹಾರ ಜ್ಞಾನ ಇದ್ದುದ್ದರಿಂದ ಎಲ್ಲಾ ವ್ಯವಹಾರವನ್ನು 2ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. 1979 ರಲ್ಲಿ ವಿಭಾಗ ಆಗಿದ ಎನ್ನಲಾದ ನಂತರ ಸದರಿ ಹಳೆ ಸರ್ವೆ ನಂ. 95, ಹೊಸ ಸರ್ವೆ ನಂ. 107 ರಲ್ಲಿ 2 ಎಕರೆ ಜಮೀನನ್ನು ವಾದಿಯೇ ವ್ಯವಸಾಯ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. 2012 ರಲ್ಲಿ ಸದರಿ 2 ಎಕರೆ ಜಮೀನಿನ ಖಾತೆಯನ್ನು 2ನೇ ಪ್ರತಿವಾದಿ ಅಕ್ರಮವಾಗಿ ಅವರ ಮಕ್ಕಳ ಹೆಸರಿಗೆ ಮಾಡಿಸಿ ಅದರ ಸಂಬಂಧವಾಗಿ ಜಮೀನನ್ನು ಅಳತೆ ಮಾಡಲು ಬಂದಾಗ ವಾದಿ ಅದನ್ನು ತಡೆದು ನಿಲ್ಲಿಸಿರುತ್ತಾರೆ ಎಂದರ ಸಾಕ್ಷಿಯ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ತಡೆದು ನಿಲ್ಲಿಸಿದ್ದಲ್ಲದೇ ವಾದಿ ಈ ದಾವೆಯನ್ನು ಹೂಡುವ ಪೂರ್ವದಲ್ಲಿ ನನಗೆ ಹಾಗೂ 2ನೇ ಪ್ರತಿವಾದಿಗೆ ನೋಟೀಸನ್ನು ಕೊಡಿಸಿದ್ದರು ಎಂದರೆ ಸರಿಯಲ್ಲ. ಆನಂತರ ಸದರಿ 2 ಎಕರೆ ಜಮೀನನ್ನು ವಾದಿಗೆ ಕೊಟ್ಟಿರುವುದು ಎಂಬುದಾಗಿ ಹಾಗೂ ಅವರು ಅದರ ಸ್ವಾಧೀನವನ್ನು ಹೊಂದಿಕೊಂಡು ಬರುತ್ತಿದ್ದರಿಂದ ಸದರಿ 2 ಎಕರೆ ಜಮೀನು ವಾದಿಗೆ ಸೇರಬೇಕು ಎಂದು ಈ ದಾವೆಯನ್ನು ನಮ್ಮ ವಿರುದ್ಧ ಹೂಡಿರುತ್ತಾರೆ ಎಂದರೆ ಸರಿಯಲ್ಲ. ಆನಂತರ ನಾನಾಗಲೀ, 2ನೇ ಪ್ರತಿವಾದಿಯಾಲೀ ವಾದಿಯ ಸದರಿ 2 ಎಕರೆ ಜಮೀನಿಗೆ ತಂಟೆ ತಕರಾರು ಮಾಡಬಾರದು ಎಂದು ಡಿಕ್ರಿಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಡಿಕ್ರಿಯಾದ ನಂತರ 2ನೇ ಪ್ರತಿವಾದಿ ಮೇಲ್ಮನವಿಯನ್ನು ಸಲ್ಲಿಸಿದ್ದು ಸದರಿ ಮೇಲ್ಮನವಿಯಲ್ಲಿ ನೀವು ನ್ಯಾಯಾಲಯಕ್ಕೆ ಹಾಜರಾಗಿರುತ್ತೀರಿ ಮುಂಚಿತವಾಗಿ ನ್ಯಾಯಾಲಯಕ್ಕೆ ಹಾಜರಾಗಲು ಏನು ತೊಂದರೆ ಇತ್ತು ಎಂದರೆ ಸಾಕ್ಷಿಯು ನಾನು ಯಾವುದೇ ಮೋಸ ಮಾಡಿಲ್ಲ, ಸದರಿ 1 ಎಕರೆಯಲ್ಲಿ ಎಲ್ಲರಿಗೂ 3 ಭಾಗ ಆಗಬೇಕು ಎಂದು ನುಡಿಯುತ್ತಾರೆ.

7. ಹಳೆ ಸರ್ವೆ ನಂ. 95, ಹೊಸ ಸರ್ವೆ ನಂ. 107 ರಲ್ಲಿರುವ ಜಮೀನನ್ನು ಅಳತೆ ಮಾಡಿಸಲು ನನ್ನ ಯಾವುದೇ ತಕರಾರು ಇಲ್ಲ. ವಾದಿಯ ಒಬ್ಬ ಮಗಳ ಅಂಗವಿಕಲೆಯಾಗಿರುವುದರಿಂದ ಹಾಗೂ ನನಗಿಂತ ಮತ್ತು 2ನೇ ಪ್ರತಿವಾದಿಗಿಂತ ವಾದಿಗೆ ಸ್ವಲ್ಪ ಬುದ್ಧಿ ಕಡಿಮೆ ಇರುವುದರಿಂದ ಹಾಗೂ ನಾನು ಸರ್ಕಾರಿ ನೌಕರನಾಗಿದ್ದರಿಂದಲೂ 2ನೇ ಪ್ರತಿವಾದಿ ವ್ಯವಹಾರ ಮಾಡಿತ್ತಿದ್ದರಿಂದಲೂ, ಸದರಿ ಸರ್ವೆ ನಂ. 95 ಹೊಸ ಸರ್ವೆ ನಂ. 107 ರಲ್ಲಿ ಮೂರೂ ಜನಕ್ಕೂ ತಲಾ ಒಂದೊಂದು ಎಕರೆಯಂತೆ ಕೊಟ್ಟು ಉಳಿದ ಒಂದು ಎಕರೆ ಜಮೀನನ್ನು ಕೂಡ ವಾದಿಗೇ ಕೊಟ್ಟಿದ್ದು ಅದಕ್ಕೆ ನಾವು ತಂಟೆ ತಕರಾರು ಮಾಡಿದ್ದರಿಂದ ವಾದಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರ ಸರಿಯಲ್ಲ. ಈ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಕೂಡ ದುರುದ್ದೇಶಪೂರ್ವಕವಾಗಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ.ಇ.

ಜೆ.ಎಂ.ಎಫ್.ಸಿ., ಹೊಳೆನರಸೀಪುರ.